**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) ಇವರು ನಿಯಮ 72ರಡಿ ನೀಡಿರುವ ಸೂಚನೆಗೆ ಮಾಹಿತಿ**

**ಸೂಚನೆ:-**

ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು ಮೇಲುಕೋಟೆ ಹೋಬಳಿ ಕಾಡೇನಹಳ್ಳಿ ಗ್ರಾಮಕ್ಕೆ ಸೇರಿರುವ ಹೂನ್ನಿಗುಡಿ ಬಾರೆಯು ಸರ್ಕಾರಿ ಜಮೀನಾಗಿದ್ದು ಸದರಿ ಜಮೀನನ್ನು ಅಕ್ರಮವಾಗಿ ಅಕ್ಕ ಪಕ್ಕದವರು ಒತ್ತುವರಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಒಂದು ತಿಂಗಳ ಒಳಗಾಗಿ ಸದರಿ ಒತ್ತುವರಿಯನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದೆಂದು ಈ ಹಿಂದೆ ಅಧಿವೇಶನದಲ್ಲಿ ಕೇಳಿದ ಪ್ರಶ್ನೆಗೆ ಸರ್ಕಾರದ ಪರವಾಗಿ ಉತ್ತರ ನೀಡಲಾಗಿತ್ತು. ಆದರೆ, ಈವರೆಗು ಒತ್ತುವರಿಯನ್ನು ತೆರವು ಗೊಳಿಸಲು ಸಾಧ್ಯವಾಗದಿರಲು ಕಾರಣಗಳೇನು ಮತ್ತು ಒತ್ತುವರಿ ತೆರವುಗೊಳಿಸಲು ವಿಫಲವಾಗಿರುವ ಅಧಿಕಾರಿಗಳ ವಿರುದ್ಧ ಸಿ.ಸಿ.ಎ ನಿಯಮಾವಳಿ ಅನ್ವಯ ಕ್ರಮ ಕೈಗೊಳ್ಳುವುದರ ಜೊತೆಗೆ ಕೂಡಲೆ ಒತ್ತುವರಿಯನ್ನು ತೆರವುಗೊಳಿಸಿ, ಸದರಿ ಜಮೀನಿನ ಅಳತೆ ಮಾಡಿ ಬೇಲಿ ಹಾಕಲು ಕ್ರಮ ಕೈಗೊಳ್ಳುವ ಕುರಿತು ಚರ್ಚಿಸಲು ಅವಕಾಶ ನೀಡಬೇಕೆಂದು ಕೋರಿರುವ ಬಗ್ಗೆ.

**ಉತ್ತರ:-**

ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಮೇಲುಕೋಟೆ ಹೋಬಳಿಯ ಕಾಡೇನಹಳ್ಳಿ ಗ್ರಾಮದ ಹೂನ್ನಿಗುಡಿ ಬಾರೆ (ರೂಡಿಗತ ಹೆಸರು) ಸ.ನಂ 73 ರ ಜಮೀನು ಮೂಲತಃ ಸರ್ಕಾರಿ ಗೋಮಾಳದ ಜಮೀನಾಗಿರುತ್ತದೆ. ಮೂಲ ಆಕಾರ್ ಬಂದ್ ನಂತೆ 226.20 ಎಕರೆ/ಗುಂಟೆ ವಿಸ್ತೀರ್ಣದ ಪೈಕಿ ಈ ಹಿಂದೆಯೇ ಮಂಜೂರಿಯಂತೆ ದುರಸ್ತಿಯಾಗಿ ಉಳಿಕೆ ಚಾಲ್ತಿ ಪಹಣಿಯಂತೆ ಅಸಲು ಗೋಮಾಳ 62.10 ಎಕರೆ/ಗುಂಟೆ ವಿಸ್ತೀರ್ಣವಿರುತ್ತದೆ. ಈ ಪೈಕಿ 11.23 ಎಕರೆ/ಗುಂಟೆ ವಿಸ್ತೀರ್ಣದ ಜಮೀನನ್ನು ಅನಧಿಕೃತ ಸಾಗುವಳಿದಾರರರಿಗೆ ಈ ಹಿಂದೆ ಮಂಜೂರಿ ಮಾಡಿದ್ದು, ಮಂಜೂರಾಗಿರುವ ಜಮೀನನ್ನು ದುರಸ್ತಿ ಮಾಡುವ ಬಗ್ಗೆ ಕ್ರಮವಹಿಸಲಾಗುತ್ತಿರುತ್ತದೆ.

ಸದರಿ ಜಮೀನಿನ ಅಕ್ರಮ ಒತ್ತುವರಿಯನ್ನು ಸಕ್ರಮಾತಿ ಕೋರಿ ನಮೂನೆ-53 & 57 ರಲ್ಲಿ ಒಟ್ಟು 38 ಅರ್ಜಿಗಳು ಸ್ವೀಕೃತವಾಗಿದ್ದು, ಒಟ್ಟು 67.17 ಎಕರೆ/ಗುಂಟೆ ವಿಸ್ತೀರ್ಣಕ್ಕೆ ಸಕ್ರಮಾತಿ ಕೋರಲಾಗಿರುತ್ತದೆ. ಚಾಲ್ತಿ ಪಹಣಿಯಲ್ಲಿನ ಗೋಮಾಳದ ವಿಸ್ತೀರ್ಣಕ್ಕಿಂತ ಹೆಚ್ಚುವರಿ ವಿಸ್ತೀರ್ಣಕ್ಕೆ ಸಕ್ರಮಾತಿ ಕೋರಿ ಅರ್ಜಿ ಸಲ್ಲಿಕೆಯಾಗಿರುವುದು ಕಂಡುಬಂದಿರುತ್ತದೆ. ಆದ್ದರಿಂದ ಸದರಿ ಅರ್ಜಿಗಳನ್ನು ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ 45 ಎಲ್‌ಜಿಪಿ 2023, ದಿನಾಂಕ: 01.12.2023 ರನ್ವಯ ಅರ್ಹ ಅರ್ಜಿಗಳನ್ನು ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯ ಮುಂದೆ ಮಂಡಿಸಿ, ಸಮಿತಿಯು ತೀರ್ಮಾನಿಸಿದ ನಂತರ ಉಳಿದ ಅನರ್ಹ ಅರ್ಜಿಗಳ ಬಗ್ಗೆ ಪ್ರಸ್ತಾವನೆ ಪಡೆದು ಜಿಲ್ಲಾಧಿಕಾರಿಯವರ ಕಛೇರಿಯಿಂದ ಅನರ್ಹ ಅರ್ಜಿಗಳನ್ನು ತಿರಸ್ಕರಿಸಿ ಆದೇಶ ಹೊರಡಿಸಲು ಕ್ರಮವಹಿಸಲಾಗುವುದು.

ಸರ್ಕಾರಿ ಗೋಮಾಳದ ಜಮೀನಿನಲ್ಲಿ ಒತ್ತುವರಿಯನ್ನು ಮಾಡಿಕೊಂಡಿರುವ ರೈತರು ನಮೂನೆ-53 & 57 ರಲ್ಲಿ ಸಕ್ರಮಾತಿ ಅರ್ಜಿ ಕೋರಿ ಸಲ್ಲಿಸಿರುವುದರಿಂದ ಒತ್ತುವರಿಯನ್ನು ತೆರವುಗೊಳಿಸಲು ಸಾಧ್ಯವಾಗಿರುವುದಿಲ್ಲ ಹಾಗೂ ಅರ್ಜಿಗಳು ಇತ್ಯರ್ಥವಾಗಿಲ್ಲದ ಕಾರಣ ಯಾವುದೇ ಅಧಿಕಾರಿ/ನೌಕರರುಗಳ ವಿರುದ್ಧ ಕ್ರಮವಹಿಸಲು ಅವಕಾಶವಿರುವುದಿಲ್ಲ. ಆದ್ದರಿಂದ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

**(ಕಡತ ಸಂಖ್ಯೆ: ಆರ್‌ಡಿ 12 ಎಲ್‌ಜಿವೈ 2025)**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು